## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ

**ಸಿ.ಸಿ ನಂ.777/2018**

ಪಿರ್ಯಾದಿಃ ಕರ್ನಾಟಕ ಸರ್ಕಾರ ಪರವಾಗಿ ಬಂಗಾರಪೇಟೆ ಪೊಲೀಸರು

**- ವಿರುದ್ಧ -**

ಆರೋಪಿಃ ನೀಲಕಂಠ ರೆಡ್ಡಿ, ಬಿನ್ ಗಂಗಿರೆಡ್ಡಿ,
41 ವರ್ಷ, ಸಕ್ಕನಹಳ್ಳಿ ಗ್ರಾಮ, ಬಂಗಾರಪೇಟೆ ತಾಲ್ಲೂಕು,

## ದೋಷಾರೋಪಣೆ

ಬಂಗಾರಪೇಟೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಶ್ರೀ ಬಿ. ಕೇಶವಮೂರ್ತಿ, ಬಿ.ಎಲ್.ಎಲ್.ಬಿ ಆದ ನಾನು ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತೇನೆ.

ಚಕ್ಕರಸನಹಳ್ಳಿ ಗ್ರಾಮದ ವಾಸಿ ನಾಗಿರೆಡ್ಡಿ ಎಂಬುವರು ದಿನಾಂಕಃ 27.02.2001 ರಂದು ಮೃತಪಟ್ಟಿದ್ದು, ಅವರ ಹೆಸರಿನಲ್ಲಿ ಚಕ್ಕರಸನಹಳ್ಳಿ ಗ್ರಾಮದ ಸರ್ವೆ ನಂಬರ್ 65 ರಲ್ಲಿ 4 ಎಕರೆ 16 ಗುಂಟೆ ಜಮೀನು ಇದ್ದು, ಆರೋಪಿಯಾದ ನೀವು ತಾನೇ ನಾಗಿರೆಡ್ಡಿ ಎಂದು 2012-2013 ನೇ ಸಾಲಿನಲ್ಲಿ ಬಂಗಾರಪೇಟೆ ಕೆನರಾ ಬ್ಯಾಂಕ್ ಅಧಿಕಾರಿಗಳಿಗೆ ಸುಳ್ಳು ಮಾಹಿತಿಯನ್ನು ಕೊಟ್ಟು, ಬೆಳೆ ಸಾಲವನ್ನು ಮಂಜೂರು ಮಾಡಿಸಿಕೊಂಡಿದ್ದು, ಸಾಲ ಮರುಪಾವತಿ ಮಾಡದೆ ಇದ್ದು, ಸುಳ್ಳು ಮಾಹಿತಿಯನ್ನು ನೀಡಿ ಸಾಲ ಪಡೆದು ಮೋಸ ಮತ್ತು ವಂಚನೆ ಮಾಡಿದ್ದು, ಈ ಪ್ರಕಾರ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ. 417, 420 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಚಕ್ಕರಸನಹಳ್ಳಿ ಗ್ರಾಮದ ವಾಸಿ ನಾಗಿರೆಡ್ಡಿ ಎಂಬುವರು ದಿನಾಂಕಃ 27.02.2001 ರಂದು ಮೃತಪಟ್ಟಿದ್ದು, ಅವರ ಹೆಸರಿನಲ್ಲಿ ಚಕ್ಕರಸನಹಳ್ಳಿ ಗ್ರಾಮದ ಸರ್ವೆ ನಂಬರ್ 65 ರಲ್ಲಿ 4 ಎಕರೆ 16 ಗುಂಟೆ ಜಮೀನು ಇದ್ದು, ಆರೋಪಿಯಾದ ನೀವು ತಾನೇ ನಾಗಿರೆಡ್ಡಿ ಎಂದು 2012-2013 ನೇ ಸಾಲಿನಲ್ಲಿ ಬಂಗಾರಪೇಟೆ ಕೆನರಾ ಬ್ಯಾಂಕ್ ಅಧಿಕಾರಿಗಳಿಗೆ ಸುಳ್ಳು ಮಾಹಿತಿಯನ್ನು ಕೊಟ್ಟು, ಬೆಳೆ ಸಾಲವನ್ನು ಮಂಜೂರು ಮಾಡಿಸಿಕೊಂಡಿದ್ದು, ಸಾಲ ಮರುಪಾವತಿ ಮಾಡದೆ ಇದ್ದು, ನೀವು ತಾನೇ ನಾಗಿರೆಡ್ಡಿ ಎಂದು ನಟಿಸಿ ವಂಚನೆ ಮಾಡಿದ್ದು, ಈ ಪ್ರಕಾರ ಆರೋಪಿಯಾದ ನೀನು ಭಾರತೀಯ ದಂಡ ಸಂಹಿತೆ ಕಲಂ. 419 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

**ಪ್ರಶ್ನೆಃ** 1. ಈಗ ನಿಮಗೆ ಓದಿ ಹೇಳಲಾದ ನಿಮ್ಮ ಮೇಲಿನ ಆಪಾದನೆಯು ನಿಮಗೆ ತಿಳಿಯಿತೆ?

ಉತ್ತರಃ

**ಪ್ರಶ್ನೆಃ** 2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಲೆಂದು ಬಯಸುತ್ತೀರಾ?

ಉತ್ತರಃ

(ಈ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಆರೋಪಿಯು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

**ದಿನಾಂಕಃ** 08.07.2022

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
**ಬಂಗಾರಪೇಟೆ.**